# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/233/15-16 ದಿನಾಂಕ :16-09-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಎ ಲಕ್ಷ್ಮೀರೆಡ್ಡಿ ತಂದೆ ರಘುರೆಡ್ಡಿ ಯರ್ರಗುಡಿ ಗ್ರಾಮ ಬಳ್ಳಾರಿ ತಾಲೂಕು<br><br>**(ಶ್ರೀ ಡಿ. ಮಲ್ಲಯ್ಯ ವಕೀಲರು ಬಳ್ಳಾರಿ)** | 1)ತಹಶೀಲ್ದಾರರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಮೋಕಾ<br>3) ಗ್ರಾಮ ಲೆಕ್ಕಾಧಿಕಾರಿಗಳು ಯರ್ರಗುಡಿ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಯರ್ರಗುಡಿ | 44ಬಿ | 0.33 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ 24/76-77 ಆದೇಶದ ಅನ್ವಯ ಹಕ್ಕುದಾಖಲಿಸುವ ಕುರಿತು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಯರ್ರಗುಡಿ ಗ್ರಾಮದ ಸ.ನಂ 44ಬಿ ವಿಸ್ತೀರ್ಣ: 0.33 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಮೋಕಾ ಇವರ ಎಂ ಆರ್ ನಂ 24/76-77 ರನ್ವಯ ಪಹಣಿಯಲ್ಲಿ ಹಕ್ಕು ದಾಖಲೆ ಮಾಡಿಕೊಡುವಂತೆ ಕೋರಿರುತ್ತಾರೆ. ಮುಂದುವರೆದು ವಾದಿಗಳ ತಾತನವರಾದ ಗುರುಭೀಮ ರೆಡ್ಡಿ ತಂದೆ ಅಣ್ಣಾಜಿ ನರಸ ರೆಡ್ಡಿ ಇವರು ನೊಂದಾಯಿತ ಕ್ರಯಪತ್ರ 963/1976-77 ದಿನಾಂಕ 29-07-1976 ರಲ್ಲಿ ಶ್ರೀಮತಿ ಪಾರ್ವತಿ ಗಂಡ ಜಯರಾಮರೆಡ್ಡಿ ಇವರಿಂದ ಜಮೀನನ್ನು ಕ್ರಯ ಹೊಂದಿರುವುದಾಗಿ ತಿಳಿಸಿರುತ್ತಾರೆ. ಹಾಗೂ 1977-78 ನೇ ಸಾಲಿನ ಹಳೆ ಕೈ ಬರಹ ಪಹಣಿ ದಾಖಲೆಯನ್ನು ಹಾಜರು ಪಡಿಸಿರುತ್ತಾರೆ ಮತ್ತು ವಾದಿಗಳ ತಾತನವರ ಹೆಸರಿನಲ್ಲಿ 1977-78 ನೇ ಸಾಲಿನಲ್ಲಿ ಕ್ರಯಪತ್ರದಂತೆ ಹಕ್ಕುಬದಲಾವಣೆಯಾದ ಬಗ್ಗೆ ಕಂದಾಯ ನಿರೀಕ್ಷಕರು ಮೋಕಾ ಇವರ ಹಕ್ಕುಬದಲಾವಣೆ ದಾಖಲೆಯನ್ನು ಹಾಜರು ಪಡಿಸಿರುತ್ತಾ, ಈ ದಾಖಲೆಗಳನ್ವಯ ಹಕ್ಕುದಾಖಲಿಸಿ ಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಸದರಿ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ ಪ್ರಶ್ನಿತ ಆಸ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡತೆ ಆದೇಶ.

ಮುಂದಿನ ಪುಟಕೆ